## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 723/2024

**ಸಾಕ್ಷಿಯನ್ನು ದಿಃ 18.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ವಸಂತ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 2 |
| ಗಂಡನ ಹೆಸರು | ಶಿವಶಂಕರ್ | | |
| ವಯಸ್ಸು | 38 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಕಲ್ಲುಣಿಕೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1 ನನ್ನ ಗಂಡ. ಚಾಸಾ–3 ನನ್ನ ಮಗಳು. ಚಾಸಾ–4 ಮತ್ತು 5 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ–2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಾನು ಈ ಪ್ರಕರಣದ ಬಗ್ಗೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ.

ದಿಃ 04.03.2024 ರಂದು ಮಧ್ಯಾಹ್ನ 2 ಗಂಟೆಗೆ ನಾನು ಮನೆಯಲ್ಲಿದ್ದಾಗ, ಚಾಸಾ–1 ರವರು ಹುಷಾರಿಲ್ಲದೇ ಮನೆಯ ಹಾಲ್ ನಲ್ಲಿ ಮಲಗಿದ್ದರು. ಆಗ ಆರೋಪಿ, ಎಸ್ ಮಹದೇವ, ಜಿತೇಂದ್ರ ಮತ್ತು ಪ್ರಿಯಾ ನಮ್ಮ ಮನೆಗೆ ಬಂದರು. ಸೈಟ್ ಮತ್ತು ಗದ್ದೆಯನ್ನು ಅತ್ತೆಯಿಂದ ನಾನು ಮತ್ತು ನನ್ನ ಗಂಡ ಬರೆಸಿಕೊಂಡಿದ್ದೇವೆ ಎಂದು ಜಗಳ ಮಾಡಿದರು. ಎಸ್. ಮಹದೇವ ಮತ್ತು ಅವರ ಮಗ ಜಿತೇಂದ್ರ ನಮ್ಮ ಅತ್ತೆ ನಡೆಯಲು ಉಪಯೋಗಿಸುವ ಊರುಗೋಲಿನಿಂದ ಚಾಸಾ–1 ರವರ ತಲೆಯ ನೆತ್ತಿಗೆ, ಮೈಕೈಗೆ ಹೊಡೆದರು. ನಂತರ ಅವರೆಲ್ಲರೂ ಹೊರಗೆ ಓಡಿ ಹೋದರು. ಚಾಸಾ–1 ರವರಿಗೆ ತಲೆಗೆ ರಕ್ತಗಾಯವಾಯಿತು. ಆಗ ನಾನು ಮತ್ತು ನನ್ನ ಮಗಳು ಚಾಸಾ–3 ರವರು ಚಾಸಾ–1 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆರೋಪಿತರು

ಹೋಗುವಾಗ ಈಗ ಇಷ್ಟಾಗಿದೆ ಮುಂದೆ ಕೊಲೆ ಮಾಡುತ್ತೇವೆ ಎಂದು ಹೇಳಿ ಹೋದರು. ಈ ಹೇಳಿಕೆಯನ್ನು ನಾನು ದಿಃ 06.03.2024ರಂದು ಪೋಲಿಸರ ಮುಂದೆ ನೀಡಿದ್ದೇನೆ. ದಿಃ 06.03.2024ರಂದು ಪೋಲಿಸರು ಸ್ಥಳ ಪಂಚನಾಮೆ ಮಾಡಲು ಸ್ಥಳಕ್ಕೆ ಬಂದಾಗ ನಾನು ಹಾಜರಿದ್ದು, ಸ್ಥಳ ತೋರಿಸಿದ್ದೇನೆ. ನನ್ನ ಜೊತೆ ಚಾಸಾ-4 ಮತ್ತು 5 ರವರು ಪಂಚರಾಗಿ ಹಾಜರಿದ್ದರು. ಸದರಿ ಮಹಜರನ್ನು ಬೆಳಿಗ್ಗೆ 10 ರಿಂದ 10.30ರವರೆಗೆ ಮಾಡಿದ್ದಾರೆ. ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಬಿದಿರು ದೊಣ್ಣೆಯನ್ನು ನಾನು ಮಹಜರು ಸಮಯದಲ್ಲಿ ಪೋಲಿಸರ ಮುಂದೆ ಹಾಜರುಪಡಿಸಿದ್ದು, ಅದನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿದ್ದಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ನ್ನು ನೋಡಿ ಗುರುತಿಸುತ್ತಾರೆ. ಆ ದಿನ ಚಾಸಾ-1 ರವರಿಗೆ ಹಲ್ಲೆ ಮಾಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. HRV ವಕೀಲರಿಂದಃ**

ಆರೋಪಿ ಹಾಜರಿದ್ದು, ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.